ಪಾಠ–3 ಜುಲೈ 13–19

# ಸಬ್ಬತ್ : ಸ್ವಾತಂತ್ರ್ಯ ದಿನ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ವಿಮೋಚನಕಾಂಡ 16:16–18; ವಿಮೋಚನಕಾಂಡ 20:8–11, ಧರ್ಮೋಪದೇಶಕಾಂಡ 5:12–15, ಮತ್ತಾಯ 12:9–13, ಯಾಜಕಕಾಂಡ 25:1–7.**

**ಸ್ಮರಣವಾಕ್ಯ : "ಮತ್ತು ಆತನು– ಸಬ್ಬತ್ ದಿನವು ಮನುಷ್ಯರಿಗೋಸ್ಕರ ಉಂಟಾಯಿತೇ ಹೊರತು ಮನುಷ್ಯರು ಸಬ್ಬತ್ ದಿನಕ್ಕೋಸ್ಕರ ಉಂಟಾಗಲಿಲ್ಲ" (ಮಾರ್ಕ 2:27).**

ಸೃಷ್ಟಿ ವಾರದ ಅಂತಿಮ ಕ್ರಿಯೆಯಂತೆ ದೇವರು ಸಬ್ಬತ್ತನ್ನು ಸೃಷ್ಟಿಸಿದನು. ದೇವರು ಏಳನೆಯ ದಿನದಲ್ಲಿ, ವಿಶ್ರಾಂತಿಯನ್ನೂ ಮಾತ್ರ ಪಡೆಯಲಿಲ್ಲ, ಆದರೆ ಪ್ರಪಂಚವು ಇರಬೇಕಾದ ರೀತಿಯಲ್ಲಿ ಒಂದು ಅವಿಭಾಜ್ಯ ಅಂಗವಾಗಿ ವಿಶ್ರಾಂತಿಯನ್ನು ಸೃಷ್ಟಿಸಿದನು ಎಂದು ಹೇಳಲಾಗಿದೆ. ಸಬ್ಬತ್ ನಾವು ದೇವರೊಂದಿಗೆ ಮತ್ತು ಇತರರೊಂದಿಗೆ ಪರಸ್ಪರ ಸಂಭಾಷಣೆ ಮಾಡಲು ಹೇಗೆ ಸೃಷ್ಟಿಸಲ್ಪಟ್ಟಿದ್ದೇವೆ ಎಂಬುದರ ಒಂದು ಪ್ರದರ್ಶನವಾಗಿದೆ.

ಹಾಗಾಗಿ ಹೊಸ ಇಸ್ರಾಯೇಲ್ಯರ ರಾಷ್ಟ್ರ ಸ್ಥಾಪನೆಗೆ ಮುಂಚೆಯೇ ಕಾಣಿಸಿಕೊಳ್ಳುವ ಸಬ್ಬತ್ತನ್ನು ತನ್ನ ಜನರಿಗೆ ದೇವರ ಯೋಜನೆಯಲ್ಲಿ ಒಂದು ಆಜ್ಞೆಯನ್ನಾಗಿ ಕಂಡುಕೊಳ್ಳುವುದು ಅಷ್ಟೇನೂ ಆಶ್ಚರ್ಯಕರವಲ್ಲ. ಇದು ಇಬ್ರಿಯರ ಜೀವನದಲ್ಲಿ ಒಂದು ಪ್ರಮುಖ ಪಾತ್ರವನ್ನು ವಹಿಸುವುದು.

ನಾವು ಸಬ್ಬತ್ ಬಗ್ಗೆ ಆಗಾಗ್ಗೆ ಮಾತನಾಡುವಾಗ ಸಂಭಾಷಣೆಯು ಅದನ್ನು ಹೇಗೆ ಕೈಕೊಂಡು ನಡೆಯಬೇಕು ಎಂಬುದರ ಕಡೆಗೆ ಬೇಗನೆ ಹೋಗುತ್ತದೆ. ನಾವು ಯಾವ ವಿಷಯವನ್ನು ಮತ್ತು ಇಷ್ಟವಾದವುಗಳನ್ನು ಮಾಡಬಾರದು? ಇವಷ್ಟೇ ಪ್ರಮುಖ ಪ್ರಶ್ನೆಯಾದರೂ, ಸಬ್ಬತ್ತನ್ನು ಪ್ರಪಂಚದಲ್ಲಿ ಮತ್ತು ದೇವಜನರ ಜೀವನದಲ್ಲಿ ದೇವರ ಕೃಪೆ ಮತ್ತು ನಿಬಂದನೆಯ ಸಂಕೇತವಾಗಿ ರೂಪಿಸಲು ವಿನ್ಯಾಸಗೊಳಿಸಲಾದ ಅವಿಭಾಜ್ಯ ಪಾತ್ರವನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ.

ಯೇಸು ಹೇಳಿದಂತೆ, ಏಳನೆಯ ದಿನದ ಸಬ್ಬತ್ ಎಲ್ಲಾ ಮನುಷ್ಯರಿಗಾಗಿ ಸೃಷ್ಟಿಸಲ್ಪಟ್ಟಿದೆ. ನಾವು ನಿಜವಾಗಿ "ಸಬ್ಬತ್ತನ್ನು ಜ್ಞಾಪಿಸಿ"ಕೊಂಡಾಗ, ಅದು ನಮ್ಮ ವಾರದ ಪ್ರತಿದಿನವೂ ಬದಲಾಯಿಸುತ್ತದೆ ಮತ್ತು ಯೇಸು ನಿರೂಪಿಸಿದಂತೆ ಇದು ಇತರರಿಗೂ ಸಹ ಆಶೀರ್ವಾದ ಸಾಧನವಾಗಬಹುದು.

**ಭಾನುವಾರ** **ಜುಲೈ 11**

## ಸಾಕಷ್ಟು ಮನ್ನ

ಗುಲಾಮಗಿರಿ ಮತ್ತು ಸಾಮಾಜಿಕ ಅವನತಿಯ ತಲೆಮಾರುಗಳ ನಂತರ ಅಂತಹ ಒಂದು ಪರಿಸ್ಥಿತಿ ತನ್ನ ತುಳಿತಕ್ಕೊಳಗಾದ ಜನರನ್ನು ಗಾಯ ಮಾಡಬಹುದೆಂದು ದೇವರು ಹೊಸದಾಗಿ ಬಿಡುಗಡೆಯಾದ ಇಸ್ರಾಯೇಲ್ಯರನ್ನು ಮೇಲೆತ್ತಲು ಪ್ರಯತ್ನಿಸಿದನು, ಒಂದು ಜೀವನ ಮಾಡುವ ವಿಧಾನವನ್ನು ತೋರಿಸಿದನು ಮತ್ತು ಅವರ ಹೊಸ ಸಮಾಜದ ಅತ್ಯುತ್ತಮ ಕ್ರಮಬದ್ಧತೆಗಾಗಿ ಅವರಿಗೆ ಆಜ್ಞೆಗಳನ್ನು ಕೊಟ್ಟನು. ಆದರೆ ಈ ಪ್ರಕ್ರಿಯೆಯ ಮೊದಲ ಭಾಗಗಳಲ್ಲಿ ಒಂದು ಪ್ರಾಯೋಗಿಕ ಮತ್ತು ತಿಳುವಳಿಕೆ ಕೊಡುವ ವಸ್ತು ಪಾಠದ ರೂಪದಲ್ಲಿ ಬಂದಿತು.

40 ವರ್ಷಗಳ ಕಾಲ ಮುಂದುವರೆದ ಅವರ ಅರಣ್ಯದ ಅಲೆದಾಟ ಈ ಜೀವನದ ಲಯವು, ದೇವರ ನಿಬಂಧನೆಯ ಮತ್ತು ನಿಸ್ವಾರ್ಥತೆಯನ್ನು ಅಭ್ಯಾಸ ಮಾಡಿದ ಇಸ್ರಾಯೇಲ್ಯರ ಸಮಾಜದ ಸಂಸ್ಕೃತಿಯ ಭಾಗವಾಗಿ ಕಾಣುವ ಸಾಕ್ಷ್ಯಾಧಾರವಾಗಿದೆ. ಇದು ಮನ್ನದ ರೂಪದಲ್ಲಿ ಬಂತು. ಪ್ರತಿ ಬೆಳಗ್ಗೆ

ಇಸ್ರಾಯೇಲ್ಯರ ಶಿಬಿರದ ಸುತ್ತ ನೆಲದ ಮೇಲೆ ಕಂಡು ಬಂದ ಒಂದು ಆಹಾರವಾಗಿದೆ.

ವಿಮೋಚನಕಾಂಡ 16:16–18 ಓದಿ. ಈ ವಚನಗಳಲ್ಲಿ ಪ್ರತಿ ವ್ಯಕ್ತಿಗೆ ನಿರ್ದಿಷ್ಟ ಅಳತೆಯನ್ನು ಒತ್ತಿ ಹೇಳಿರುವ ಮಹತ್ವವನ್ನು ಏನೆಂದು ನೀವು ಯೋಚಿಸುತ್ತೀರಿ?

2 ಕೊರಿಂಥದವರಿಗೆ 8:10–15 ರಲ್ಲಿ, ಪೌಲನು ಕ್ರೈಸ್ತರು ಹೇಗೆ ಕೊಡಬೇಕು ಎಂದು ಒಂದು ಉದಾಹರಣೆಯಲ್ಲಿ ಈ ಕಥೆಯನ್ನು ಉಲ್ಲೇಖಿಸಿದ್ದಾನೆ : 'ಸದ್ಯಕ್ಕೆ ನಿಮ್ಮ ಸಮೃದ್ಧಿಯ ನಿಮ್ಮ ಕೊರತೆಯನ್ನು ನೀಗಿಸುತ್ತದೆ. ಮುಂದೆ ಅವರ ಸಮೃದ್ಧಿಯು ನಿಮ್ಮ ಕೊರತೆಯನ್ನು ನೀಗಿಸುವುದು' (ವಚನ 14).

ದೇವರು ತನ್ನ ಜನರಿಗೆ ಮತ್ತು ಆತನ ಸೃಷ್ಟಿಗೆ ಸಾಕಷ್ಟು ಒದಗಿಸಿದ್ದಾನೆ ಎಂಬುದು ಇಸ್ರಾಯೇಲ್ಯರಿಗೂ ಮತ್ತು ನಮಗೂ ಪಾಠವಾಗಿದೆ. ನಮಗೆ ಬೇಕಾದುದನ್ನು ಮಾತ್ರ ತೆಗೆದುಕೊಂಡು ಮತ್ತು ನಮಗೆ ಅಧಿಕವಾದದ್ದನ್ನು ಇತರರೊಂದಿಗೆ ಹಂಚಿಕೊಳ್ಳಲು ತಯಾರಾದರೆ ಎಲ್ಲರಿಗೂ ಕಾಳಜಿ ವಹಿಸಿ ಮತ್ತು ಒದಗಿಸಿದಂತಾಗುತ್ತದೆ. ದಿನಕ್ಕೆ ಸಾಕಷ್ಟು ಮಾತ್ರ ತೆಗೆದುಕೊಳ್ಳುವುದರಿಂದ ಜನರು ಮುಂದಿನ ದಿನದಲ್ಲಿ ಹೆಚ್ಚು ಸಿಗುತ್ತದೆ ಎಂದು ಭರವಸೆಯಿಡಬೇಕು. ತುಳಿತಕ್ಕೊಳಗಾದ ಜನರು ಉದಾಹರಣೆಗೆ ಇಸ್ರಾಯೇಲ್ ಗುಲಾಮರು, ತಮ ಸ್ವಂತ ಬದುಕುಳಿಯುವುದರ ಮೇಲೆ ಗಮನಹರಿಸುತ್ತಾರೆ. ಆದರೆ ದೇವರು ಅವರಿಗೆ ವಿಶ್ವಾಸ ಉದಾರತೆ ಮತ್ತು ಹಂಚಿಕೊಳ್ಳುವ ಜೀವನವನ್ನು ಪ್ರದರ್ಶಿಸಲು ಬಯಸಿದನು.

ಆದರೆ ಈ ಅಭ್ಯಾಸದ ಮತ್ತೊಂದು ಗಮನಾರ್ಹವಾದ ಆಯಾಮವೂ ಸಹ ಇದೆ. ಪ್ರತಿ ಶುಕ್ರವಾರ ಮನ್ನ ಎರಡರಷ್ಟು ಭಾಗ ನೆಲದ ಮೇಲೆ ಕಾಣಿಸಿಕೊಂಡಿತು ಮತ್ತು ಆ ದಿನ ಮಾತ್ರ ಸಬ್ಬತ್ ಸಿದ್ಧತೆಗಾಗಿ ಜನರು ಹೆಚ್ಚುವರಿ ಮನ್ನವನ್ನು ಕೂಡಿಸಿಕೊಳ್ಳಬೇಕಾಗಿತ್ತು. ಸಬ್ಬತ್ತಿಗಾಗಿ ವಿಶೇಷ ನಿಬಂಧನೆಯು ಅವರ ಎಲ್ಲಾ ಅಗತ್ಯಗಳಿಗೆ ದೇವರ ಮೇಲೆ ಭರವಸೆ ಇಡುವುದನು ಕಲಿಯಲು ಒಂದು ಹೆಚ್ಚಾದ ಮಾರ್ಗವಾಯಿತು. ಮನ್ನದ ಈ ಹೆಚ್ಚುವರಿ ಭಾಗವು, ದೇವರು ಭಾಗದಲ್ಲಿ ಕೃಪೆಯ ಕ್ರಿಯೆಯಾಗಿತ್ತು. ಏಳನೇ ದಿನದ ಸಬ್ಬತ್ತು ದೇವರು ಅವರಿಗೆ

ಭರವಸೆ ನೀಡಿದ ಉಳಿದವುಗಳನ್ನು ಇನ್ನೂ ಹೆಚ್ಚು ಸಂಪೂರ್ಣವಾಗಿ ಆನಂದಿಸಲು ನೆರವಾಯಿತು.

**ಶುಕ್ರವಾರಗಳಲ್ಲಿ ನಾವು ಏನು ಮಾಡಬಹುದೋ ಅದು ದೇವರು ಸಬ್ಬತ್ ದಿನದಲ್ಲಿ ನಮಗೆ ಏನು ಕೊಡುತ್ತಾನೋ ಅದನ್ನು ಉತ್ತಮವಾಗಿ ಆನಂದಿಸಲು ಸಹಾಯ ಮಾಡುತ್ತದೆಯೇ?**

**ಸೋಮವಾರ ಜುಲೈ 15**

## ಸಬ್ಬತ್ತಿಗಾಗಿ ಎರಡು ಕಾರಣಗಳು

**ವಿಮೋಚನಕಾಂಡ 20:8–11 ಮತ್ತು ಧರ್ಮೋಪದೇಶಕಾಂಡ 5:12–15 ಓದಿ. ನಾಲ್ಕನೇ ಆಜ್ಞೆಯು ಈ ಆವೃತ್ತಿಗಳಲ್ಲಿ ಪರಸ್ಪರ ಹೇಗೆ ಪೂರಕವಾಗಿವೆ?**

'ಜ್ಞಾಪಕದಲ್ಲಿಡುವುದು' ಎಂಬ ಪದವು ಸಂಬಂಧದ ಒಂದು ಪ್ರಮುಖ ಭಾಗವಾಗಿದೆ. ದೇವರು ಅದನ್ನು ತನ್ನ ಜನರೊಂದಿಗೆ ಪುನಃ ಸ್ಥಾಪಿಸಲು ಹುಡುಕುತ್ತಾನೆ. ದೇವರು ನಮ್ಮ ಸೃಷ್ಟಿಕರ್ತ ಮತ್ತು ವಿಮೋಚಕ ಎಂಬ ಸತ್ಯ ಸಂಬಂಧದ ಮೇಲೆ ಕೇಂದ್ರೀಕರಿಸಲ್ಪಟ್ಟಿದೆ. ನಾಲ್ಕನೇ ಆಜ್ಞೆಯ ಎರಡು ಅಧ್ಯಾಯಗಳಲ್ಲಿ ಎರಡೂ ಪಾತ್ರಗಳಲ್ಲಿ  ಕಾಣಿಸಿಕೊಳ್ಳುತ್ತವೆ. ಹೀಗಾಗಿ ಸಬ್ಬತ್ ಮತ್ತು ಅದರ ರೂಢಿಯ ಆಚರಣೆಯೊಂದಿಗೆ ನಿಕಟವಾಗಿ ಸಂಯೋಜಿಸಲಾಗಿದೆ.

ಅನೇಕ ಸುಳ್ಳು ದೇವರುಗಳ ಪ್ರಬಲ ಭೂಮಿಯಿಂದ ಹೊರಬರುವ ಇಸ್ರಾಯೇಲ್ಯರಿಗೆ ಸೃಷ್ಟಿಕರ್ತನಾಗಿ ದೇವರು ನಿಜವಾದ ಪಾತ್ರವನ್ನು ಜ್ಞಾಪಿಸುವ ಅಗತ್ಯವಿತ್ತು. ಅದನ್ನು ಮಾಡಲು ಸಬ್ಬತ್ ಒಂದು ನಿರ್ಣಾಯಕ ಮಾರ್ಗವಾಗಿತ್ತು. ಶುಕ್ರವಾರದಂದು ಹೆಚ್ಚುವರಿ ಮನ್ನವನ್ನು ಒದಗಿಸುವುದು ಸಾಪ್ತಾಹಿಕ ಚಕ್ರದ ಸಂದರ್ಭದಲ್ಲಿ ಹೆಚ್ಚು ಮಹತ್ವದ್ದಾಗಿತ್ತು. ಆತನ ಸೃಷ್ಟಿಸುವ ಶಕ್ತಿಗೆ ಪ್ರಬಲ ಉದಾಹರಣೆಯಾಗಿದೆ. ವಿಮೋಚನಕಾಂಡ 20ನೇ ಅಧ್ಯಾಯದ ನಾಲ್ಕನೆಯ ಆಜ್ಞೆಯಲ್ಲಿ ದೇವರು ನಮ್ಮ ಸೃಷ್ಟಿಕರ್ತನೆಂದು ಸ್ಪಷ್ಟವಾಗಿ ಪ್ರಕಟಿಸುತ್ತದೆ.

ಇದಕ್ಕೆ ವಿರುದ್ಧವಾಗಿ ಅವರ ರಕ್ಷಣೆ, ವಿಮೋಚನೆ ಮತ್ತು ಕಾಪಾಡುವುದನ್ನು ಧರ್ಮೋಪದೇಶಕಾಂಡ 5ನೇ ಅಧ್ಯಾಯದ ನಾಲ್ಕನೇ ಆಜ್ಞೆಯಲ್ಲಿ ಕೇಂದ್ರೀಕರಿಸಿದೆ. ಇದು ಇಸ್ರಾಯೇಲ್ಯರು ನಿಯಮಿತವಾಗಿ ಪುನಃ ಹೇಳಬೇಕಾದ ಒಂದು ಕಥೆ.

ಅವರು ವಿಶೇಷವಾಗಿ ಪ್ರತಿ ಸಬ್ಬತ್ತಿನೊಂದಿಗೆ ಅದನ್ನು ಮರು ಸಂಪರ್ಕಿಸಬಹುದಿತ್ತು. ಅವರ ಮೊದಲ ಕಥೆ ಐಗುಪ್ತದಲ್ಲಿನ ಗುಲಾಮಗಿರಿಯಿಂದ ನಿಜವಾದ, ದೈಹಿಕ ಕಾಪಾಡುವಿಕೆಯಾಗಿತ್ತು. ಆದರೆ ದೇವರ ಮತ್ತು ರಕ್ಷಣೆಯ ಮೇಲಿನ ಅವರ ಗ್ರಹಿಕೆಯು ಬೆಳೆಯಿತು, ಸಬ್ಬತ್ ಸಹ ಒಂದು ವಾರದ ಚಿಹ್ನೆಯಾಗಿ ಮತ್ತು ಅವರ ಆಧ್ಯಾತ್ಮಿಕ ರಕ್ಷಣೆಯ ಆಚರಣೆ ಆಯಿತು.

ಸಬ್ಬತ್ತಿಗಾಗಿ ಎರಡೂ ಪ್ರೇರಣೆಗಳು ದೇವರ ಮತ್ತು ಅವನ ಜನರ ನಡುವಿನ ಸಂಬಂಧವನ್ನು ಮರುಸ್ಥಾಪಿಸುತ್ತಿವೆ. "ಇದಲ್ಲದೆ ತಮ್ಮನ್ನು ದೇವಜನರನ್ನಾಗಿ ಮಾಡಿರುವ ಯೆಹೋವನು ನಾನೇ ಎಂದು ತಿಳಿದುಕೊಳ್ಳುವಂತೆ ನನಗೂ ಅವರಿಗೂ ಗುರುತಾದ ಸಬ್ಬತ್ ದಿನಗಳನ್ನು ಅವರಿಗೆ ನೇಮಿಸಿದೆನು" (ಯೆಹೆಜ್ಕೇಲ 20:12) ಮತ್ತು ನಾನು ನೋಡಿದಂತೆ ಇದು ಈ ಗುಂಪಿನ ಜನರಿಗೆ ಮಾತ್ರವೇ ಅಲ್ಲ. ಈ ಸಂಬಂಧದ ಅಡಿಪಾಯದ ಮೇಲೆ ಅವರು ಹೊಸ ರೀತಿಯ ಸಮಾಜವನ್ನು ಸ್ಥಾಪಿಸಬೇಕಾಯಿತು. ಅವುಗಳಲ್ಲಿ ಒಂದು ಹೊರಗಿನವರಿಗೂ ಮತ್ತು ವಿಶಾಲ ಪ್ರಪಂಚಕ್ಕೆ ಆಶೀರ್ವಾದವಾಯಿತು.

ಸಬ್ಬತ್ ದಿನವನ್ನು ಆಚರಿಸಬೇಕೆಂಬುದನ್ನು ನಿಮ್ಮ ದೇವರಾದ ಯೆಹೋವನು ಇದಕ್ಕಾಗಿಯೇ ಆಜ್ಞಾಪಿಸಿದ್ದಾನೆ" (ಧರ್ಮೋಪದೇಶಕಾಂಡ 5:15). ನಮ್ಮ ಸೃಷ್ಟಿ ಮತ್ತು ವಿಮೋಚನೆಗಳನ್ನು ನೆನಪಿಸುವ ಒಂದು ಮಾರ್ಗವಾಗಿ ಸಬ್ಬತ್ತನ್ನು ಆಚರಿಸಲಾಗುತ್ತದೆ. ನಮ್ಮ ಸಂಬಂಧದಲ್ಲಿ ನಾವು ಬೆಳೆಯಲು ಕರ್ತನೊಂದಿಗೆ ಮಾತ್ರವೇ ಅಲ್ಲದೆ ನಮ್ಮ ಸುತ್ತಲಿರುವ ಜನರೊಂದಿಗೂ ಕೂಡ ಮುಂದುವರಿಸಬಹುದು. ದೇವರ ಕೃಪೆಯು ನಮಗೆ ಇದೆ; ಆದ್ದರಿಂದ, ನಾವು ಇತರರಿಗೆ ಕೃಪೆ ತೋರಿಸಬೇಕು.

**ಯಾವ ವಿಧಗಳಲ್ಲಿ ಸಬ್ಬತ್ತನ್ನು ಕೈಕೊಂಡು ನಡೆಯುವುದರಿಂದ ನಮ್ಮನ್ನು ಉತ್ತಮರು, ಕರುಣೆಯುಳ್ಳ ಹೆಚ್ಚು ಕಾಳಜಿಯುಳ್ಳ ಮತ್ತು ದಯೆಯುಳ್ಳ ಜನರನ್ನಾಗಿ ಮಾಡುತ್ತದೆ?**

**ಮಂಗಳವಾರ** **ಜುಲೈ 16**

# ಸಮಾನತೆಯ ದಿನ

ವಿಮೋಚನಕಾಂಡ 20 ಮತ್ತು ಧರ್ಮೋಪದೇಶಕಾಂಡ 5 ರಲ್ಲಿನ ಹತ್ತು ಆಜ್ಞೆಗಳನ್ನು ವೇಗವಾಗಿ ಓದುವುದರಿಂದ ಒಂದು ವಿಷಯು ಸ್ಪಷ್ಟವಾಗಿರುವುದೇನೆಂದರೆ ನಾಲ್ಕನೇ ಆಜ್ಞೆಯು ಅತ್ಯಂತ ಹೆಚ್ಚಿನ ವಿವರಗಳನ್ನು ಹೊಂದಿದೆ. ಕೆಲವು ಆಜ್ಞೆಗಳು ಕೆಲ ಆವೃತ್ತಿಗಳಲ್ಲಿ ಕೇವಲ ಮೂರು ವಾಕ್ಯ (ಪದ) ಗಳಲ್ಲಿ ದಾಖಲಾಗಿವೆ. (ಇಬ್ರಿಯ ಭಾಷೆಯಲ್ಲಿ ಕೆಲಸವನ್ನು ಕೇವಲ ಎರಡು ಪದಗಳಲ್ಲಿ ವ್ಯಕ್ತಪಡಿಸಲಾಗಿದೆ). ನಾಲ್ಕನೇ ಆಜ್ಞೆಯು ಏಕೆ, ಏನು ಮತ್ತು ಸಬ್ಬತ್ ದಿನವನ್ನು ಜ್ಞಾಪಕದಲ್ಲಿಡುವವರು ಯಾರು ಎಂಬ ಪ್ರಶ್ನೆಗಳಿಗೆ ಸ್ಥಳ ಮಾಡಿಕೊಡುತ್ತದೆ.

**ವಿಮೋಚನಕಾಂಡ 20:8–11 ಓದಿ, ಆಳುಗಳು, ಅಪರಿಚಿತರು, ಪ್ರಾಣಿಗಳ ಬಗ್ಗೆ ಇದು ಏನು ಹೇಳುತ್ತದೆ ಮತ್ತು ಇದರ ಅರ್ಥವೇನು?**

ಇತರರ ಬಗ್ಗೆ ಗಮನಹರಿಸುವುದು ಸಬ್ಬತ್ ವಿವರಣೆಗಳಲ್ಲಿ ಗಮನಾರ್ಹವಾಗಿದೆ. ಸಿಗ್ವೆ ಕೆ ಟನ್ಸ್ಟಟ್ ಈ ರೀತಿಯ ಆಜ್ಞೆಯು ಪ್ರಪಂಚದ ಎಲ್ಲಾ ಸಂಸ್ಕೃತಿಗಳಲ್ಲಿ ವಿಶಿಷ್ಟವಾಗಿದೆ ಎಂದು ವಾದಿಸುತ್ತಾನೆ. ಸಬ್ಬತ್ ಆಜ್ಞೆಗಳನ್ನು ಅವನು ಆದ್ಯತೆಯು ಕೆಳಗಿನಿಂದ ಮೇಲೆ ನೋಡುವುದು ಮೇಲಿಂದ ಕೆಳಗೆ ನೋಡುವುದಲ್ಲ. ಸಮಾಜದ ಬಲಹೀನರು ಮತ್ತು ಅತ್ಯಂತ ದುರ್ಬಲ ಸದಸ್ಯರಿಗೆ ಮೊದಲ ಪರಿಗಣನೆ (ಆದ್ಯತೆ) ನೀಡಬೇಕು. ಹೆಚ್ಚು ವಿಶ್ರಾಂತಿಯ ಅಗತ್ಯವಿರುವವರು– ಗುಲಾಮರು, ಪರಕೀಯ ನಿವಾಸಿಗಳು, ಹೊರೆಹೊರುವ ಪ್ರಾಣಿಯ–ವಿಶೇಷ ಉಲ್ಲೇಖನಕ್ಕಾಗಿ ಪ್ರತ್ಯೇಕಿಸಲಾಗುತ್ತದೆ. ಏಳನೆಯ ದಿನದ ವಿಶ್ರಾಂತಿ ಭಾಗದಲ್ಲಿ ದುರ್ಬಲರಾದವರು. ಮೂಕ ಪ್ರಾಣಿಗಳು ಕೂಡ ಮಿತ್ರರನ್ನು ಹುಡುಕುತ್ತವೆ" ಎಂದು ವಿವರಿಸುತ್ತಾರೆ– ದಿ ಲಾಸ್ಟ್ ಮೀನಿಂಗ್ ಆಫ್ ದಿ ಸೆವೆಂತ್ ಡೇ (ಮಿಚಿಗನ್ : ಆಂಡ್ರ್ಯೂಸ್ ಯೂನಿವರ್ಸಿಟಿ ಪ್ರೆಸ್ 2009), ಪುಟಗಳು 126, 127.

ಎಲ್ಲರೂ ಆನಂದಿಸಲ್ಪಡುವ ದಿನ ಸಬ್ಬತ್ ಎಂದು ಒತ್ತಾಯಿಸುವುದರ ಮೇಲೆ ಆಜ್ಞೆಯು ವಿಶೇಷ ಗಮನವನ್ನು ಹೊಂದಿದೆ. ಸಬ್ಬತ್ ಬೆಳಕಿನಲ್ಲಿ, ನಾವೆಲ್ಲರೂ

ಸಮಾನರಾಗಿದ್ದೇವೆ. ನಾವು ಒಬ್ಬ ಉದ್ಯೋಗದಾತರಾಗಿದ್ದರೆ, ನಿಮ್ಮ ನೌಕರರನ್ನು ಸಬ್ಬತ್ ದಿನದಲ್ಲಿ ಕೆಲಸ ಮಾಡಿಸುವ ಯಾವುದೇ ಅಧಿಕಾರ ನಿಮಗಿಲ್ಲ. ಅದಕ್ಕಾಗಿ ದೇವರು ಅವರಿಗೂ ಸಹ ವಿಶ್ರಾಂತಿ ದಿನ ನೀಡಿದ್ದಾನೆ. ನೀವು ಉದ್ಯೋಗಿಯಾಗಿದ್ದರೆ– ಅಥವಾ ಒಬ್ಬ ಗುಲಾಮನಾಗಿದ್ದರೂ ಸಹ– ನಿಮ್ಮ ಉಳಿದ ದಿನಗಳಿಗಾಗಿ ದೇವರಿಂದ ಸಮಾನವಾಗಿ ಸೃಷ್ಟಿಸಲ್ಪಟ್ಟಿದ್ದಿರಿ ಮತ್ತು ವಿಮೋಚಿಸಲ್ಪಟ್ಟಿದ್ದೀರಿ ಎಂದು ಸಬ್ಬತ್ ದಿನ ನೆನಪು ಮಾಡುತ್ತದೆ ಮತ್ತು ನಿಮ್ಮ ಸಾಮಾನ್ಯ ಕರ್ತವ್ಯಗಳನ್ನು ಹೊರತುಪಡಿಸಿ ಈ ರೀತಿಯಲ್ಲಿ ಇದನ್ನು ಆಚರಿಸಲು ದೇವರು ನಿಮ್ಮನ್ನು ಆಹ್ವಾನಿಸುತ್ತಾನೆ. ಸಬ್ಬತ್ತನ್ನು ಕೈಕೊಂಡು ನಡೆಯುವ ಜನರಿಂದ ಹೊರಗಿರುವವರು ಸಹ– "ನಿನ್ನ ಊರಲ್ಲಿ ಇರುವ ಅನ್ಯದೇಶದವರು ಯಾವ ಕೆಲಸವನ್ನು ಮಾಡಬಾರದು" (ವಿಮೋಚನಕಾಂಡ 20:10) – ಸಬ್ಬತ್ ದಿನದಿಂದ ಪ್ರಯೋಜನ ಪಡೆಯಬೇಕು.

ಈ ಪರಿಕಲ್ಪನೆಯು ಗುಲಾಮಗಿರಿ ಮತ್ತು ಕಡೆಗಣಿಸಲ್ಪಟ್ಟ ಅವರ ತಾಜಾ ಸ್ವಂತ ಅನುಭವದಿಂದ ಇಸ್ರಾಯೇಲ್ಯರಿಗೆ ಗಮನಾರ್ಹ ಬದಲಾವಣೆಯು ದೃಷ್ಟಿಕೋನವಾಗಿರಬಹುದು. ಈಗ ಅವರನ್ನು ಹೊಸ ಭೂಮಿಯಲ್ಲಿ ಸ್ಥಾಪಿಸಬೇಕಾದರೆ ಅವರು ಹಿಂದಿನ ದಬ್ಬಾಳಿಕೆಗಾರರ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕೆಂದು ದೇವರು ಬಯಸ್ಲಿಲ್ಲ. ಹಾಗೆಯೇ ಅವರ ಸಮಾಜಕ್ಕಾಗಿ ವಿವರವಾದ ಕಾನೂನುಗಳನ್ನು ನೀಡಿದನು. ಆತನು ನಮಗೆ (ವಾಸ್ತವವಾಗಿ, ನಾವೆಲ್ಲರೂ) ಸಾಪ್ತಾಹಿಕ ಜ್ಞಾಪಕವನ್ನು ನೀಡಿದರು. ಶಕ್ತಿಯುತವಾದ ರೀತಿಯಲ್ಲಿ ದೇವರ ಮುಂದೆ ಎಷ್ಟು ಸಮಾನರಾಗಿದ್ದೇವೆ ಅಲ್ಲವೆ.

ನಿಮ್ಮ ಸಮುದಾಯದಲ್ಲಿ ನೀವು ಹೇಗೆ ಸಬ್ಬತ್ತನ್ನು ಹಂಚಿಕೊಳ್ಳಬಹುದು. ಅಂದರೆ ನೀವು ಸಬ್ಬತ್ತನ್ನು ಕೈಕೊಂಡು ನಡೆಯುವುದರಿಂದ ನಿಮ್ಮ ಸಮುದಾಯದಲ್ಲಿ ಇತರರು ಹೇಗೆ ಪ್ರಯೋಜನ ಪಡೆಯಬಹುದು?

**ಬುಧವಾರ** **ಜುಲೈ 17**

## ಗುಣಪಡಿಸುವ ದಿನ

ಸಬ್ಬತ್‌ಗೆ ಮೂಲಭೂತ ದರ್ಶನ ಮತ್ತು ಸಬ್ಬತ್ ಕೈಕೊಂಡು ನಡೆಯುವುದು ವಿಶಾಲ ಮತ್ತು ಅಂತರ್ಗತವಾಗಿದ್ದರೂ, ಯೇಸು ಭೂಮಿಗೆ ಬಂದ ಸಮಯದಿಂದ

ಸಬ್ಬತ್ ಅನೇಕ ಧಾರ್ಮಿಕ ಮುಖಂಡರಿಗೆ ಸ್ವಲ್ಪ ಭಿನ್ನವಾಗಿತ್ತು. ಸ್ವಾತಂತ್ರ್ಯ ಮತ್ತು ಸಮಾನತೆಯ ದಿನಕ್ಕೆ ಬದಲಾಗಿ, ಸಬ್ಬತ್ ಒಂದು ಮಾನವನ ದಿನ, ಸಾಂಪ್ರದಾಯಿಕ ನಿಯಮಗಳ ಮತ್ತು ನಿರ್ಬಂಧಗಳ ದಿನವಾಯಿತು. ಆತನ ದಿನದಲ್ಲಿ ವಿಶೇಷವಾಗಿ ಅವರು ಇತರರ ಮೇಲೆ ಹೇರಿದ್ದ ಅಂತಹ ವರ್ತನೆಗಳಿಗೆ ವಿರುದ್ಧವಾಗಿ ಯೇಸು ಎದ್ದು ನಿಂತನು.

ಸಬ್ಬತ್ತಿನಲ್ಲಿ ಅನೇಕ ಸ್ವಸ್ಥತೆಯನ್ನು ಪ್ರದರ್ಶಿಸುವುದರ ಮೂಲಕ ಇದನ್ನು ಆತನು ಎಷ್ಟು ಮಹತ್ವವಾಗಿಸಿದನೆಂಬುದು ಆಸಕ್ತಿಕರವಾಗಿದೆ. ಸಬ್ಬತ್ ದಿನದಲ್ಲಿ ಯೇಸು ಉದ್ದೇಶ ಪೂರ್ವಕವಾಗಿ ಈ ಅದ್ಭುತಗಳನ್ನು ನಡೆಸಿದನೆಂದು ತೋರುತ್ತದೆ. ಯಾವುದೇ ದಿನಕ್ಕೆ ವಿರುದ್ಧವಾಗಿ, ಸಬ್ಬತ್ ಏನಾಗಬೇಕೆಂಬುದರ ಬಗ್ಗೆ ಪ್ರಮುಖ ಸಂಗತಿಯನ್ನು ಪ್ರದರ್ಶಿಸಿದನು. ಈ ಕಥೆಗಳಲ್ಲಿ ಅನೇಕ ವೇಳೆ ಸಬ್ಬತ್ ದಿನದಲ್ಲಿ ಸೂಕ್ತವಾದ ಸ್ವಸ್ಥಪಡಿಸುವಿಕೆಯ ಬಗ್ಗೆ ಯೇಸು ಪ್ರತಿಕ್ರಿಯಿಸಿದನು ಮತ್ತು ಹೆಚ್ಚಾಗಿ ಪರಿಸಾಯರು ಆತನ ಹೇಳಿಕೆಗಳಿಂದ ಅವರು ಯೇಸುವನ್ನು ಕೊಲ್ಲಲು ತಮ್ಮ ಕಥಾ ವಸ್ತುವನ್ನು ಮುಂದುವರೆಸಲು ಉಪಯೋಗಿಸಿಕೊಂಡರು.

**ಮತ್ತಾಯ 12:9–13, ಮಾರ್ಕ 1:21–26, 3:1–6 ಮತ್ತು ಯೋಹಾನ 9:1–6 ರಲ್ಲಿ ಯೇಸುವಿನ ಸಬ್ಬತ್ ಗುಣಪಡಿಸುವ ಕಥೆಗಳನ್ನು ಓದಿ. ಈ ಕಥೆಗಳಲ್ಲಿ ನೀವು ಗಮನಿಸಿದ ಗಮನಾರ್ಹ ವಿಷಯಗಳು ಯಾವುವು?**

ಸಬ್ಬತ್ ಮುಖ್ಯ ಎಂದು ಯೇಸು ದೃಢಪಡಿಸಿದನು. ನಾವು ಸಬ್ಬತ್ ಸಮಯವನ್ನು ವಿಶೇಷವಾಗಿ ಕೈಕೊಳ್ಳುವುದಕ್ಕೆ ಅದರ ಸುತ್ತ ಗಡಿಗಳನ್ನು ಇರಿಸಬೇಕು ಮತ್ತು ಈ ಸಾಪ್ತಾಹಿಕ ಸಮಯವನ್ನು ದೇವರೊಟ್ಟಿಗೆ ನಮ್ಮ ಕುಟುಂಬಗಳು, ನಮ್ಮ ಸಭೆ ಮತ್ತು ನಮ್ಮ ಸಮುದಾಯದೊಂದಿಗೆ ನಮ್ಮ ಸಂಬಂಧಗಳನ್ನು ಬೆಳೆಸಿಕೊಳ್ಳುವ ಅವಕಾಶವನ್ನು ನೀಡಬೇಕು. ಆದರೆ ಸಬ್ಬತ್ತನ್ನು ಕೈಕೊಂಡು ನಡೆಯುವುದು ಕೇವಲ ನಮ್ಮ ಸ್ವಾರ್ಥಕ್ಕಾಗಿ ಇರಬಾರದು. ಯೇಸು ಹೇಳಿದಂತೆ "ಸಬ್ಬತ್ ದಿನದಲ್ಲಿ ಒಳ್ಳೇ ಕೆಲಸ ಮಾಡುವುದು ತಕ್ಕದೇ ಸರಿ" (ಮತ್ತಾಯ 12:12).

ಅನೇಕ ಸಭಾ ಸದಸ್ಯರು ಇತರರನ್ನು ಕಾಳಜಿ ವಹಿಸಲು ಕೆಲಸ ಮಾಡುತ್ತಾರೆ. ಆದರೆ ನಮ್ಮಲ್ಲಿ ಅನೇಕರು ಸಹ ಹೆಚ್ಚು ಸಹಾಯ ಮಾಡಬೇಕು ಎಂದು

ಭಾವಿಸುತ್ತಾರೆ. ಗಾಯಗೊಂಡವರು, ತುಳಿತಕ್ಕೊಳಗಾದವರು ಅಥವಾ ಮರೆಯಲ್ಪಟ್ಟವರ ಬಗ್ಗೆಯೂ ಸಹ, ನಾವು ಕಾಳಜಿ ವಹಿಸಬೇಕು. ನಮ್ಮ ನಿಯಮಿತ ಕೆಲಸವನ್ನು ಮುಂದುವರಿಸಬಾರದೆಂದು ಮತ್ತು ವಾರದ ಒತ್ತಡದಿಂದ ಮುಕ್ತವಾಗಿರಬೇಕೆಂದು ನಾವು ಆಜ್ಞಾಪಿಸಲ್ಪಟ್ಟಿರುವುದರಿಂದ, ಸಬ್ಬತ್ತಿನಲ್ಲಿ ನಾವು ಇತರರ ಬಗ್ಗೆ ಈ ಕಾಳಜಿಯನ್ನು ವಹಿಸುವುದಕ್ಕೋಸ್ಕರವೇ ಈ ಸಮಯದ ಮೇಲೆ ಕೇಂದ್ರೀಕರಿಸಲಾಗಿದೆ. ಇದು ಸಬ್ಬತ್ತನ್ನು ನೈಜವಾಗಿ ಮತ್ತು ಸಕ್ರಿಯವಾಗಿ ಕೈಕೊಂಡು ನಡೆಯುವ ಒಂದು ಮಾರ್ಗವಾಗಿದೆ : "ನಾಲ್ಕನೆಯ ಆಜ್ಞೆಯ ಪ್ರಕಾರ ವಿಶ್ರಾಂತಿ ಮತ್ತು ಧಾರ್ಮಿಕ ಆರಾಧನೆಗೆ ಪ್ರತಿಷ್ಠಿಸಲಾಗಿದೆ. ಎಲ್ಲಾ ಜಾತ್ಯಾತೀತ ಉದ್ಯೋಗವನ್ನು ಅಮಾನತುಗೊಳಿಸಬೇಕು. ಆದರೆ ಕರುಣೆ ಮತ್ತು ದಯೆಯು ಕರ್ತನ ಉದ್ದೇಶಕ್ಕೆ ಅನುಗುಣವಾಗಿದೆ.... ತೊಂದರೆಗೊಳ್ಳಪಟ್ಟವರನ್ನು ವಾಸಿ ಮಾಡುವುದು, ದುಃಖಿಸುವವರನ್ನು ಸಂತೈಸುವುದು, ದೇವರ ಪರಿಶುದ್ಧ ದಿನವನ್ನು ಗೌರವಿಸುವ ಪ್ರೀತಿಯ ದುಡಿಮೆಯಾಗಿದೆ" – ಎಲೆನ್ ಜಿ ವೈಟ್, ವೆಲ್‌ಫೇರ್ ಮಿನಿಸ್ಟ್ರೀ ಪುಟ 77.

**ಸಬ್ಬತ್ ದಿನದಲ್ಲಿ ಇತರರ ಒಳ್ಳೆಯದಕ್ಕಾಗಿ ನೀವು ಏನು ಮಾಡುತ್ತೀರಿ?**

**ಗುರುವಾರ** **ಜುಲೈ 18**

## ಭೂಮಿಗಾಗಿ ಸಬ್ಬತ್ ವಿಶ್ರಾಂತಿ

ನಾವು ನೋಡಿದಂತೆ, ಸಬ್ಬತ್ ಇಸ್ರಾಯೇಲ್ಯರ ರಾಷ್ಟ್ರದ ಜೀವನಚಕ್ರದಲ್ಲಿ ಬೇರು ಬಿಟ್ಟ ಭಾಗವಾಗಿತ್ತು. ಸಬ್ಬತ್ ಮೂಲ ತತ್ವ ಪ್ರತಿ ವಾರದಲ್ಲಿ ಕೇವಲ ಒಂದು ದಿನ ಮಾತ್ರವಲ್ಲ. ಪ್ರತಿ ಏಳನೆಯ ವರ್ಷವೂ ಇದು ವಿಶೇಷ ವಿಶ್ರಾಂತಿಯನ್ನು ಒಳಗೊಂಡಿತ್ತು. ಏಳು ವರ್ಷಗಳ ಏಳು ಜತೆಗಳು ಅಂದರೆ ಪ್ರತಿ 50ನೇ ವರ್ಷದ ನಂತರ ಜುಬಿಲೀ ವರ್ಷದಲ್ಲಿ ಅಂತ್ಯಗೊಳ್ಳುತ್ತದೆ.

**ಯಾಜಕಕಾಂಡ 25:1–7 ಓದಿ. ಈ ರೀತಿಯ ಆದೇಶದ ಬಗ್ಗೆ ಏನು ಗಮನಾರ್ಹವಾಗಿದೆ? ಇ ರೀತಿಯ ತತ್ವವನ್ನು ನಿಮ್ಮ ಜೀವನ ಮತ್ತು ಕೆಲಸಕ್ಕೆ ನೀವು ಯಾವ ರೀತಿಯಲ್ಲಿ ಸಾಧ್ಯವಾಗುವಂತೆ ಸೇರಿಸಿಕೊಳ್ಳಬಹುದು?**

ಸಬ್ಬತ್ ವರ್ಷವು ಕೃಷಿ ಭೂಮಿಯನ್ನು ಬೇಸಾಯ ಮಾಡದ ವರ್ಷಕ್ಕೆ ಬೀಳುವುದನ್ನು ಅನುಮತಿಸಿತು. ಇದು ಭೂಮಿಯನ್ನು ಕಾಪಾಡಿಕೊಳ್ಳುವ

ಗಮನಾರ್ಹವಾದ ಪಾರುಪತ್ಯಗಾರಿಕೆಯ ಕ್ರಿಯೆಯಾಗಿದೆ ಮತ್ತು ಇದನ್ನು ಕೃಷಿ ಪದ್ಧತಿಯ ಜ್ಞಾನ ಎಂದು ವ್ಯಾಪಕವಾಗಿ ಗುರುತಿಸಲಾಗಿದೆ.

ಗುಲಾಮರಿಗೆ ಏಳನೆಯ ವರ್ಷವು ಸಹ ಮಹತ್ವದಾಗಿತ್ತು (ವಿಮೋಚಾಕಾಂಡ 21:1–11). ಈ ಘಟನೆಯಲ್ಲಿ ಯಾವುದೇ ಇಸ್ರಾಯೇಲ್ಯರು ತಮ್ಮನ್ನು ಗುಲಾಮಗಿರಿಯೊಳಗೆ ಮಾರಾಟ ಮಾಡಿಕೊಳ್ಳದಂತೆ ತುಂಬಾ ಋಣಿಯಾಗಿದ್ದಾರೆ. ಏಳನೆಯ ವರ್ಷದಲ್ಲಿ ಅವರನ್ನು ಮುಕ್ತರನ್ನಾಗಿ ಮಾಡಬೇಕಾಯಿತು. ಅಂತೆಯೇ, ಏಳನೆಯ ವರ್ಷದ ಅಂತ್ಯದಲ್ಲಿ ಬಾಕಿ ಉಳಿದಿರುವ ಸಾಲುಗಳನ್ನು ರದ್ದುಗೊಳಿಸಬೇಕು (ಧರ್ಮೋಪದೇಶಕಾಂಡ 15:1–11).

ಅರಣ್ಯದಲ್ಲಿ ಇಸ್ರಾಯೇಲ್ಯರಿಗೆ ದೇವರು ನೀಡಿದ ಮನ್ನದ ಹಾಗೆ, ಒಂದು ಋತುವಿಗಾಗಿ ಬೆಳೆ ಬೆಳೆಯುವುದನ್ನು ನಿಲ್ಲಿಸುವುದು. ದೇವರು ಹಿಂದಿನ ವರ್ಷ ಸಾಕಷ್ಟು ಒದಗಿಸಿದ್ದಾನೆ ಮತ್ತು ಏಳನೆಯ ವರ್ಷದಲ್ಲಿ ಯಾವುದರಿಂದ ಭೂಮಿಯು ತನಗೆ ತಾನೇ ಉತ್ಪಾದಿಸಿತು ಎಂಬುದು ನಂಬಿಕೆಯ ಕ್ರಿಯೆಯಾಗಿದೆ. ಅಂತೆಯೇ, ಗುಲಾಮರನ್ನು ಬಿಡುಗಡೆಗೊಳಿಸಿ ಮತ್ತು ಸಾಲಗಳನ್ನು ರದ್ದುಪಡಿಸುವುದು ಒಂದು ಕರುಣೆಯ ಕ್ರಿಯೆಯಾಗಿದೆ. ಆದರೆ ನಮ್ಮ ಅಗತ್ಯಗಳನ್ನು ಪೂರೈಸುವುದು ಸಹ ದೇವರ ಶಕ್ತಿಯಲ್ಲಿ ನಂಬಿಕೆ ಇಡುವ ಒಂದು ಕ್ರಿಯೆಯಾಗಿದೆ. ಒಂದು ಅರ್ಥದಲ್ಲಿ, ಜನರು ಸ್ವತಃ ತಮಗೆ ಒದಗಿಸಿಕೊಳ್ಳುವ ಸಲುವಾಗಿ ಇತರರನ್ನು ತುಳಿಯಬೇಕಾಗಿಲ್ಲ ಎಂದು ಕಲಿಯಬೇಕಾದ ಅಗತ್ಯವಿತ್ತು.

ಸಬ್ಬತ್ತಿನ ತತ್ವಗಳು ಮತ್ತು ಮಾದರಿಯು ಇಸ್ರಾಯೇಲ್ಯರ ಸಮಾಜ ರಚನೆಗೆ ನಿಕಟವಾಗಿ ಬಂಧಿಸಲ್ಪಟ್ಟಿತ್ತು. ಸಮಕಾಲೀನ ಸಬ್ಬತ್ತನ್ನು ಕೈಕೊಂಡು ನಡೆಯುವುದು ನಮ್ಮ ಇತರ ದಿನಗಳಲ್ಲಿ ರೂಪಾಂತರಗೊಳ್ಳುವ ಒಂದು ಆಧ್ಯಾತಿಕ ಶಿಸ್ತು ಆಗಿರಬೇಕು. ಪ್ರಾಯೋಗಿಕ ಅರ್ಥದಲ್ಲಿ ಮೊದಲು ಆತನ ರಾಜ್ಯಕ್ಕಾಗಿ ತವಕಿಸು ಎಂಬ ಯೇಸುವಿನ ಸೂಚನೆಗಳನ್ನು ಜೀವಿಸಲು ಸಬ್ಬತ್ ಒಂದು ಮಾರ್ಗವಾಗಿದೆ. "ನಿಮ್ಮ ಪರಲೋಕದ ತಂದೆ ಈಗಾಗಲೇ ನಿಮ್ಮ ಎಲ್ಲಾ ಅಗತ್ಯಗಳನ್ನು ತಿಳಿದಿದ್ದಾನೆ... ಮತ್ತು ನಿಮಗೆ ಬೇಕಾಗಿರುವ ಎಲ್ಲವನ್ನು ಅವನು ಕೊಡುವನು" ಮತ್ತಾಯ 6:32, 33.

**ಸಬ್ಬತ್ತನ್ನು ಕೈಕೊಂಡು ನಡೆಯುವುದಕ್ಕೆ ನಿಮ್ಮ ವಾರದ ಇತರ ದಿನಗಳಲ್ಲಿ ಯಾವ ವ್ಯತ್ಯಾಸವನ್ನು ಮಾಡಬೇಕು? ಎಲ್ಲಾದರ ನಂತರ ಭಾನುವಾರದಿಂದ ಶುಕ್ರವಾರದವರೆಗೂ ನೀವು ದುರಾಶೆ ಮತ್ತು ಸ್ವಾರ್ಥಿಗಳಾಗಿದ್ದರೆ ಸಬ್ಬತ್‌ನಲ್ಲಿ ನಿಮಗೆ ಇವುಗಳಲ್ಲಿ ಯಾವುದು ಇಲ್ಲದಿದ್ದರೆ ಅದು ನಿಜವಾಗಿ ಯಾವ ವಿಷಯವಾಗಿದೆ? ಅಥವಾ ನೀವು ಆ ವಾರ ಉಳಿದ ದಿನಗಳಲ್ಲಿ ಆ ರೀತಿಯಾಗಿದ್ದರೆ ನಿಜವಾಗಿಯೂ ನೀವು ಸಬ್ಬತ್ತಿನಲ್ಲಿ ಆ ವಿಷಯಗಳಲ್ಲಿ ಇರುವುದಿಲ್ಲವೇ?**

**ಶುಕ್ರವಾರ** **ಜುಲೈ 19**

**ಮುಂದಿನ ಆಲೋಚನೆ :** ಎಲೆನ್ ಜಿ ವೈಟ್‌ರವರ ಪೇಟ್ರಿಯಾರ್ಕ್ಸ್ ಅಂಡ್ ಪ್ರಾಪೆಟ್ಸ್‌ನಲ್ಲಿ "ಫ್ರಮ್ ರೆಡ್ ಸೀ ಟೂ ಸೀನಾಯ್" ಪುಟಗಳು 295–297, ದಿ ಡಿಸೈರ್ ಆಫ್ ಏಜಸ್‌ನಲ್ಲಿ "ದಿ ಸಬ್ಬತ್" ಪುಟಗಳು 281–289 ಸಿಗ್ವೆ ಕೆ. ಟಾನ್‌ಸ್ಟಡ್‌ರವರ ದಿ ಲಾಸ್ಟ್ ಮೀನಿಂಗ್ ಆಫ್ ದಿ ಸೆವೆಂತ್ ಡೇ "ದಿ ಸೋಷಿಯಲ್ ಕನ್ಸೆರ್ನ್ಸ್ ಆಫ್ ದಿ ಸೆವೆಂತ್ ಡೇ" ಪುಟಗಳು 125–143.

ಶೋಷಣೆಗೆ ಒಳಪಟ್ಟವರನ್ನು ಉಪಶಮನ ಮಾಡುವ ಕೆಲಸವು ಸಬ್ಬತ್ ಆಜ್ಞೆಗೆ ಅನುಗುಣವಾಗಿದೆ ಎಂದು ಯೇಸು ಅವರಿಗೆ ಹೇಳಿದ್ದಾನೆ. ಬಳಲುತ್ತಿರುವ ಮನುಷ್ಯಕುಲ ಸೇವೆಯನ್ನು ಸಲ್ಲಿಸುವುದಕ್ಕೆ ಪರಲೋಕ ಭೂಲೋಕಗಳ ನಡುವೆ ಇಳಿಯುತ್ತಾ ಮತ್ತು ಏರುತ್ತಾ ಇರುವ ದೇವರ ದೇವದೂತರುಗಳ ಕೆಲಸಕ್ಕೆ ಇದು ಅನುಗುಣವಾಗಿತ್ತು.....

"ಮತ್ತು ಮನುಷ್ಯನು ಕೂಡ ಈ ದಿನದಲ್ಲಿ ನಿರ್ವಹಿಸುವುದಕ್ಕೆ ಒಂದು ಕೆಲಸ ಹೊಂದಿದ್ದಾನೆ. ಜೀವನದ ಅಗತ್ಯಗಳಿಗೆ ಗಮನ ಕೊಡಬೇಕು. ಅಸ್ವಸ್ಥರಿಗೆ ಕಾಳಜಿ ವಹಿಸಬೇಕು. ಅಗತ್ಯವಿರುವವರಿಗೆ ಅಗತ್ಯಗಳನ್ನು ಪೂರೈಸಬೇಕು. ಬಳಲುತ್ತಿರುವವರನ್ನು ಉಪಶಮನ ಪಡಿಸುವುದಕ್ಕೆ ಸಬ್ಬತ್ತನ್ನು ನಿರ್ಲಕ್ಷಿಸಿದವನನ್ನು ತಪ್ಪಿತಸ್ಥನೆಂದು ಪರಿಗಣಿಸುವುದಿಲ್ಲ. ದೇವರ ಪರಿಶುದ್ಧ ವಿಶ್ರಾಂತಿಯ ದಿನ ಮನುಷ್ಯನಿಗಾಗಿ ಮಾಡಲ್ಪಟ್ಟಿತು ಮತ್ತು ಕರುಣೆಯ ಕೃತ್ಯಗಳು ಅದರ ಉದ್ದೇಶದೊಂದಿಗೆ ಪರಿಪೂರ್ಣ ಸಾಮರಸ್ಯದಿಂದ ಕೂಡಿದೆ. ಸಬ್ಬತ್ ಅಥವಾ ಇನ್ನಿತರ ದಿನದಂದು ಉಪಶಮನಗೊಳಿಸಬಹುದಾದ ಒಂದು ಗಂಟೆಯ ನೋವನ್ನು ಆತನ ಸೃಷ್ಟಿಗಳು ಬಳಲುವುದಕ್ಕೆ ದೇವರು ಬಯಸುವುದಿಲ್ಲ" – ಎಲೆನ್ ಜಿ ವೈಟ್‌ರವರ ದಿ ಡಿಸೈರ್ ಆಫ್ ಏಜಸ್, ಪುಟಗಳು 206, 207.

## ಚರ್ಚಿಸಬೇಕಾದ ಪ್ರಶ್ನೆಗಳು

1. ದೇವರಲ್ಲಿ ನಿಮ್ಮ ನಂಬಿಕೆಯ ಪ್ರದರ್ಶವಾಗಿ ನೀವು ಸಬ್ಬತ್ತನ್ನು ಯಾವ ರೀತಿ ಅನುಭವಿಸಿದ್ದೀರಿ? ನಿಮ್ಮ ಜೀವನದಲ್ಲಿ 'ಮನ್ನ' ತರಹದ ಅನುಭವವನ್ನು ಹೊಂದಿದ್ದೀರಾ? ಅಲ್ಲಿ ದೇವರು ಆತನಲ್ಲಿ ನಿಮ್ಮ ನಂಬಿಕೆಗೆ ಪ್ರತಿಯಾಗಿ ಒದಗಿಸಿದ್ದಾನೆಯೇ?

2. ವಿಮೋಚನಕಾಂಡ 20:8–11 ಮತ್ತು ಧರ್ಮೋಪದೇಶಕಾಂಡ 5:12–15 ವಚನಗಳಲ್ಲಿ ಕಂಡುಬರುವ ನಾಲ್ಕನೇ ಆಜ್ಞೆಯಲ್ಲಿ ನಾವು ನೋಡಿದಂತೆ, ದೇವರು ಸಬ್ಬತ್ತಿನ ವಿವಿಧ ಅಂಶಗಳನ್ನು ಒತ್ತಿ ಹೇಳಿದನು. ನೀವು ಸಬ್ಬತ್ ದಿನದ ಯಾವ ಒಂದು ಅಂಶವನ್ನು ಬಹಳ ಪ್ರಶಂಸಿಸುತ್ತೀರಿ?

3. ವರ್ಗ ಅಥವಾ ಪ್ರತ್ಯೇಕವಾಗಿ ನಿಮ್ಮ ಬುದ್ಧಿ ಮತ್ತೆ (ಮೆದುಳಿನ ಚಂಡ ಮಾರುತ)ವನ್ನು ನಿಮ್ಮ ಸಮುದಾಯದಲ್ಲಿ ಸಬ್ಬತ್‌ನ ಆಶೀರ್ವಾದ ಮತ್ತು ಪ್ರಯೋಜನಗಳನ್ನು ಕೆಲವು ರೀತಿಯಲ್ಲಿ ಹಂಚಿಕೊಳ್ಳಬಹುದು.

4. ಸಬ್ಬತ್ ನಿಮ್ಮ ಜೀವನವನ್ನು ಬದಲಾಯಿಸುವ ಕೆಲವು ವಿಧಾನಗಳು ಯಾವುವು? ಸಬ್ಬತ್ ನಮೂನೆಗಳು ಮತ್ತು ತತ್ವಗಳು ಹೆಚ್ಚಿನ ಪ್ರಭಾವವನ್ನು ಹೊಂದಿರಬೇಕಾದ ನಿಮ್ಮ ಜೀವನದ ಇತರ ಭಾಗಗಳು ಇವೆಯೇ?

**ಸಾರಾಂಶ :** ದೇವರು ಸಬ್ಬತ್ತನ್ನು ಸೃಷ್ಟಿ ಮತ್ತು ವಿಮೋಚನೆಯನ್ನು ನೆನಪಿಸುವ ಒಂದು ಮಾರ್ಗವಾಗಿ ಕೊಟ್ಟನು, ಆದರೆ ಇದು ಹಲವು ಪ್ರಾಯೋಗಿಕ ಪ್ರಯೋಜನಗಳನ್ನು ಸಹ ಹೊಂದಿದೆ. ಇದು ನಮಗೆ ದೇವರ ಅವಕಾಶ ಒದಗಿಸುವುದರಲ್ಲಿ ನಂಬಿಕೆ ಇಡಲು ಕಲಿಸುತ್ತದೆ; ಮತ್ತು ಇದು ನಮ್ಮ ಎಲ್ಲ ಸಂಬಂಧಗಳನ್ನು ಮಾರ್ಪಡಿಸುವ ಆಧ್ಯಾತ್ಮಿಕ ಶಿಸ್ತು ಆಗಬಹುದು. ಸಬ್ಬತ್‌ಗಾಗಿ ಯೇಸು ತನ್ನ ಆದರ್ಶವನ್ನು ಪ್ರದರ್ಶಿಸಿದನು ಮತ್ತು ಅನಾರೋಗ್ಯವನ್ನು ಗುಣಪಡಿಸುವ ಮೂಲಕ ಅಗತ್ಯವಿರುವವರಿಗೆ ಪ್ರಯೋಜನ ಮಾಡುವ ದಿನ ಸಬ್ಬತ್ ಎಂದು ಒತ್ತಿ ಹೇಳಿದನು.